# ಎಲ್‌ನೀನೊದಿಂದ ಜಾಗತಿಕ ಪಾಮೆಣ್ಣೆ ಉತ್ಪಾದನೆಯ ಪ್ರಗತಿ 2016ರಲ್ಲಿ ಕುಂಠಿತ

ಪ್ರಮುಖ ಖಾದ್ಯತೈಲ ವಿಶ್ಲೇಷಣಾಕಾರ ಥೋಮಸ್ ಮೆಲ್ಕ್ ಪ್ರಕಾರ 2016ರ ಜಾಗತಿಕ ಪಾಮೆಣ್ಣೆ ಉತ್ಪಾದನೆಯ ಪ್ರಗತಿ ಎಲ್‌ನೀನೋ ಪ್ರಭಾವದಿಂದ ಅರ್ಧದಷ್ಟು ಕಡಿಮೆಯಾಗಲಿದೆ. ಮಲೇಶ್ಯಾ ಮತ್ತು ಇಂಡೋನೇಶ್ಯಾಗಳ ಪ್ರಮುಖ ಪಾಮ್ ಉತ್ಪಾದಕ ಎಸ್ಟೇಟ್‌ಗಳು ಈಗಾಗಲೇ ಬಾಧಿತವಾಗಿವೆಯೆನ್ನಲಾಗಿದೆ.

ಪಾಮ್ ಉತ್ಪಾದನೆ ಈ ವರ್ಷದ ಕೊನೆಯ 3 ತಿಂಗಳು ಮತ್ತು 2016ರ ಆರಂಭದ ಮೂರು ತಿಂಗಳಲ್ಲಿ ಸಾಮಾನ್ಯ 3 ಮಿಲಿಯನ್ ಟನ್ ಉತ್ಪಾದನೆಗೆ ಬದಲಾಗಿ 1.5 ಮಿಲಿಯನ್ ಟನ್‌ಗೆ ಇಳಿಕೆಯಾಗಬಹುದೆಂದು ಅವರ ಖಾದ್ಯತೈಲ ಕಾನ್ಫರೆನ್ಸ್‌ನಲ್ಲಿ ಹೇಳಿದರು.

ಎಲ್‌ನಿನೋದಿಂದ ಏಶೀಯಾ ಮತ್ತು ಪೂರ್ವ ಆಫ್ರಿಕಾದ ಭಾಗಗಳಲ್ಲಿ ಒಣಹವೆ ಮತ್ತು ದಕ್ಷಿಣ ಅಮೆರಿಕಾದಲ್ಲಿ ಜಡಿಮಳೆ ಮತ್ತು ಪ್ರವಾಹ ಉಂಟಾಗಲಿದೆಯೆನ್ನಲಾಗಿದೆ. ಸಪ್ಟೆಂಬರ್ ತಿಂಗಳ ಮಲೇಶ್ಯಾದ ಪಾಮೆಣ್ಣೆ ಉತ್ಪಾದನೆ ಆಗಸ್ಟ್‌ಗಿಂತ ಇಳಿಕೆಯಾಗಿದೆ ಎಂದು ಮೇಲ್ಕ್ ಹೇಳಿದರು.